ಚನ್ನಪಟ್ಟಣ ತಾಲ್ಲೂಕಿನ ಸಿ ಮತ್ತು ಡಿ ವರ್ಗದ ಜಮೀನಿನ ಬಗ್ಗೆ

1069-ಶ್ರೀ ಸಾದತ್ ಅಲಿ ಖಾನ್ (ಚನ್ನಪಟ್ಟಣ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚನ್ನಪಟ್ಟಣ ತಾಲ್ಲೂಕಿನಲ್ಲಿ ಎಷ್ಟು ಎಕರೆ ಸಿ ಮತ್ತು ಡಿ ವರ್ಗದ ಜಮೀನು ಕಂದಾಯ ಇಲಾಖೆಗೆ ಸೇರಿರುತ್ತದೆ (ಸರ್ವೆ ನಂ. ವಿಸ್ತೀರ್ಣ ಮತ್ತು ಗ್ರಾಮದ ಹೆಸರುಗಳನ್ನು ನೀಡುವುದು):

ಆ) ಸಿ ಮತ್ತು ಡಿ ವರ್ಗದ ಜಮೀನನ್ನು ಅರಣ್ಯ ಇಲಾಖೆಗೆ ವರ್ಗಾಯಿಸಲಾಗಿದೆಯೇ?

ಇ) ಆಗಿದ್ದಲ್ಲಿ ಅಂತಹ ಜಮೀನುಗಳ ವಿಸ್ತೀರ್ಣ, ಸರ್ವೆ ನಂಬರ್‌ಗಳ ವಿವರ ನೀಡುವುದು?

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು):

ಅ) 10397 ಎಕರೆ 30 ಗುಂಟೆಗಳು (ವಿವರಗಳ ಅನುಬಂಧ ನೀಡಲಾಗಿದೆ)

ಆ) ಅರಣ್ಯ ಇಲಾಖೆಗೆ ಕಾದಿರಿಸಿ ಅದಿಸೂಚಿತವಾದ ಜಮೀನನ್ನು ಹೊರತುಪಡಿಸಿ ಉಳಿದ ಜಮೀನನ್ನು ದಿನಾಂಕ 3-1-91 ರಲ್ಲಿ ಕಂದಾಯ ಇಲಾಖೆಗೆ ವಾಪಸ್ಸು ಪಡೆಯಲಾಗಿದೆ.

ಇ) ಮೇಲಿನ (ಅ)ನಲ್ಲಿರುವಂತೆ.

ಲಂಬಾಣಿ ತಾಂಡಗಳನ್ನು; ಹ್ಯಾಮ್ ಲೆಟ್ ಗೊಲ್ಲರ ಹಟ್ಟಿ ಮುಂತಾದವುಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತನೆ.

485-ಆರ್. ನಾರಾಯಣ (ಬೆಳ್ಳಾವಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಲಂಬಾಣಿ ತಾಂಡಗಳು ಗೊಲ್ಲರ ಹಟ್ಟಿಗಳು ಹ್ಯಾಮ್‌ಲೆಟ್‌ಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸುವ ಬಗ್ಗೆ ಯಾವುದಾದರೂ ಆಳತೆಗೋಲುಗಳನ್ನು ರೂಪಿಸಲಾಗಿದೆಯೆ?

ಆ) ತುಮಕೂರು ಜಿಲ್ಲೆಯಲ್ಲಿ ಇದುವರೆವಿಗೆ ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸುವ ಲಂಬಾಣಿ ತಾಂಡಗಳು ಗೊಲ್ಲರ ಹಟ್ಟಿಗಳು, ಹ್ಯಾಮ್‌ಲೆಟ್‌ಗಳ ಸಂಖ್ಯೆ ಎಷ್ಟು?

ಇ) ಹೆಚ್ಚು ಲಂಬಾಣಿ ತಾಂಡಗಳು, ಗೊಲ್ಲರ ಹಟ್ಟಿಗಳು ಹ್ಯಾಮ್‌ಲೆಟ್ ಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಲು ಸುಗಮ ವಾಗುವಂತೆ ಲಂಬಾಣಿ ತಾಂಡಗಳು ಗೊಲ್ಲರ ಹಟ್ಟಿಗಳು ಮತ್ತು ಹ್ಯಾಮಲೆಟ್ ಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಲು ಪ್ರಸ್ತುತ ಇರುವ ಆಳತೆ ಗೋಲನ್ನು ಸರ್ಕಾರವು ಸಡಿಲಗೊಳಿಸುವುದೇ?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು):

ಅ) ಹೌದು.

ಆ) ಆಕ್ಷೇಪಣೆಗಳನ್ನು ಕರೆದಿರುವ 5ಕರಡು ಅಧಿಸೂಚನೆಗಳನ್ನು ಹೊರಡಿಸಲಾಗಿದೆ.

ಇ) ಹೌದು. ಇದು ಪರಿಶೀಲನೆಯಲ್ಲಿದೆ.

ಉಪಾಧ್ಯಕ್ಷಣೆಯವರು : ಸಭೆಯ ಮುಂದೆ ಮಂಡಿಸಲಾಯಿತು.

ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯಮಂತ್ರಿ) ಮಾನ್ಯ ಅಧ್ಯಕ್ಷರೆ, 1964ನೇ ಸಾಲಿನ ಕರ್ನಾಟಕ ಸಿನಿಮಾ (ನಿಯಂತ್ರಣ) ಅಧಿನಿಯಮದ 22ನೇ ಕಲಮಿನ ಮೇರೆಗೆ

1. ಅಧಿಸೂಚನೆ ಸಂಖ್ಯೆ : ಹೆಚ್ ಡಿ 202: ಸಿಎನ್ಎ : 92, ದಿನಾಂಕ : 04-11-1992 ಚನ್ನಪಟ್ಟಣ ತಾಲ್ಲೂಕು ನಾಗಾವಾರದ ಶ್ರೀ ನಿಶಾಂತ ಸಂಚಾರಿ ಚಿತ್ರಮಂದಿರವನ್ನು ಟೆಂಪರರಿ ಚಿತ್ರಮಂದಿರವನ್ನಾಗಿ ಪರಿವರ್ತಿಸುವ ಬಗ್ಗೆ.
2. ಅಧಿಸೂಚನೆ ಸಂಖ್ಯೆ : ಹೆಚ್ಡಿ : 210 : ಸಿಎನ್ಎ : 92, ದಿನಾಂಕ: 17-12-1992 ತುಮಕೂರು ಜಿಲ್ಲೆ ಗುಬ್ಬಿಯ ಸೈಟ್ ನಂ. 290 :2260ನಲ್ಲಿ ಖಾಯಂ ಚಿತ್ರ ಮಂದಿರ ನಿರ್ಮಿಸಲು ನೀಡಿದ ನಿರಾಕ್ಷೇಪಣಾ ಪತ್ರದ ಅವಧಿಯನ್ನು ವಿಸ್ತರಿಸುವ ಬಗ್ಗೆ
3. ಅಧಿಸೂಚನೆ ಸಂಖ್ಯೆ : ಹೆಚ್ ಡಿ: 228:ಸಿಎನ್ಎ:92, ದಿನಾಂಕ : 17-12-1992 ಧಾರವಾಡ ಜಿಲ್ಲೆ ಹಿರೇಕೆರೂರಿನ ಶ್ರೀ ಕುಮಾರೇಶ್ವರ ಸಂಚಾರಿ ಚಿತ್ರಮಂದಿರವನ್ನು ಅರೆ ಖಾಯಂ ಚಿತ್ರಮಂದಿರವನ್ನಾಗಿ ಪರಿವರ್ತಿಸುವ ಅಧಿಸೂಚನೆಗಳನ್ನು ಸಭೆಯ ಮುಂದಿಡುತ್ತೇನೆ.

1951ನೇ ಇಸವಿಯ ರಾಜ್ಯ ಹಣಕಾಸು ನಿಗಮದ ಅಧಿನಿಯಮ 38(3)ನೇ ಕಲಮಿನ ಮೇರೆಗೆ :

4. 1991-92ನೇ ಸಾಲಿನ ಕರ್ನಾಟಕ ರಾಜ್ಯ ಹಣಕಾಸು ನಿಗಮದ 33ನೇ ವಾರ್ಷಿಕ ವರದಿ.

1951ನೇ ಇಸವಿಯ ರಾಜ್ಯ ಹಣಕಾಸು ನಿಗಮದ ಅಧಿನಿಯಮ 37(7)ನೇ ಕಲಮಿನ ಮೇರೆಗೆ:

5. 31ನೇ ಮಾರ್ಚ್ 1991ನೇ ಸಾಲಿಗೆ ಅಂತ್ಯಗೊಂಡ ಕರ್ನಾಟಕ ರಾಜ್ಯ ಹಣಕಾಸು ನಿಗಮದ ಲೆಕ್ಕದ ಮೇಲಿನ ಲೆಕ್ಕ ಪರಿಶೋಧನಾ ವರದಿ.

1956ನೇ ಇಸವಿಯ ಕಂಪನಿಗಳ ಅಧಿನಿಯಮ 619(ಎ) ಕಲಮಿನ ಮೇರೆಗೆ:

6. 1990-91ನೇ ಸಾಲಿನ ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಯಮಿತದ 27ನೇ ವಾರ್ಷಿಕ ವರದಿ.
7. 1991-92ನೇ ಸಾಲಿನ ಕರ್ನಾಟಕ ರಾಜ್ಯ ತೆಂಗಿನ ನಾರು ಅಭಿವೃದ್ಧಿ ನಿಗಮ ನಿಯಮಿತದ 7ನೇ ವಾರ್ಷಿಕ ವರದಿಯನ್ನು ಸಭೆಯ ಮುಂದಿಡುತ್ತೇನೆ.

II. ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಮಂತ್ರಿ) ಮಾನ್ಯ ಅಧ್ಯಕ್ಷರೆ, 1987ನೇ ಇಸವಿಯ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರದ ಅಧಿನಿಯಮ 48(5)ನೇ ಕಲಮಿನ ಮೇರೆಗೆ.

1990-91ನೇ ಸಾಲಿನ ಕೆ.ಜಿ.ಎಫ್. ನಗರಾಭಿವೃದ್ಧಿ ಪ್ರಾಧಿಕಾರದ ಲೆಕ್ಕ ಪರಿಶೋಧನಾ ವರದಿಯನ್ನು ಸಭೆಯ ಮುಂದಿಡುತ್ತೇನೆ.